ನಾನು ಹೇಳುತ್ತೇನೆ: ‘ಅಲ್ರಪ್ಪಾ, ಅವರ ದೇಶದಲ್ಲಿ ಕುಳಿತುಕೊಂಡು ಅವರ ಬಗ್ಗೆ ಕೆಟ್ಟದಾಗಿ ಮಾತಾಡ್ತೀರಿ? ನಿಮ್ಮ ದೇಶಕ್ಕೆ ವಾಪಾಸು ಹೋಗಿಬಿಡಿ’ ಎಂದು. ಅವರು ‘ನೀನು ಯಾವಾಗಲೂ ಕರಿಯರ ಪರ’ ಎಂದು ಆಕ್ಷೇಪಿಸುತ್ತಾರೆ.

**◆ ಭಾರತೀಯರಿಗೆ ಆಫ್ರಿಕನರಲ್ಲಿ ವೈವಾಹಿಕ ಸಂಬಂಧ ನಡೆದಿವೆಯೇ?**

ಬಹಳ ಕಡಿಮೆ. ಚೆನ್ನೈನಿಂದ ಅಶ್ವಲಾಯನ ಎಂಬ ಯುವಕ, ಗುಜರಾತಿಗಳ ಸಕ್ಕರೆ ಕಂಪನಿಯಲ್ಲಿ ಕೆಲಸ ಮಾಡಲು ಬಂದಿದ್ದ. ಮಹಾಜಾಣ. ಸುಂದರ. ಆತ ಕೀನ್ಯನ್ ತರುಣಿ ವಾಂಗೇಚಿಯ ಪ್ರೇಮದಲ್ಲಿ ಬಿದ್ದ. ಆಕೆಯನ್ನು ಮದುವೆಯಾದ. ಅವರಿಗೆ ಎರಡು ಮುದ್ದಾದ ಮಕ್ಕಳಾದವು. ಜನಾಂಗ ಸಂಕರದ ಮದುವೆ ಆದನೆಂದು ಕಂಪನಿ ಅವನನ್ನು ಕೆಲಸದಿಂದ ತೆಗೆದುಹಾಕಿತು. ಒಂದು ದಿನ ಅಶ್ವಲಾಯನ ದಂಪತಿ ಕಾರು ಅಪಘಾತದಲ್ಲಿ ತೀರಿಕೊಂಡರು. ಅವರ ಮಕ್ಕಳು ಬಹಳ ಸಣ್ಣವಿದ್ದವು. ಅವನ್ನು ವಾಂಗೇಚಿಯ ಅಮ್ಮ ತನ್ನ ಮನೆಗೆ ಕರೆದುಕೊಂಡು ಹೋದಳು. ಮುಂದೆ ತಮ್ಮ ಮೊಮ್ಮಕ್ಕಳನ್ನು ಕರೆದೊಯ್ಯಲು ಚೆನ್ನೈನಿಂದ ಅಶ್ವಲಾಯನನ ಅಪ್ಪ ಬಂದರು. ಅವರನ್ನು ಮಕ್ಕಳಿರುವಲ್ಲಿ ಕರೆದುಕೊಂಡು ಹೋದೆ. ಅವರು ಮೊಮ್ಮಕ್ಕಳನ್ನು ಚೆನ್ನಾಗಿ ಓದಿಸಿದರು. ಆಫ್ರಿಕನ್ ಗುಂಗುರುಕೂದಲಿನ ದೆಸೆಯಿಂದ ಮಕ್ಕಳಿಗೆ ಶಾಲೆಗಳಲ್ಲಿ ತೊಂದರೆ ಆಗುತ್ತಿತ್ತಂತೆ. ಈಗ ಕೃಷ್ಣ ವೈದ್ಯನಾಗಿದ್ದಾನೆ. ಮನು ಲಾಯರ್ ಆಗಿ ಸಿಂಗಪುರದಲ್ಲಿದ್ದಾನೆ.

**◆ ಭಾರತೀಯ ಮೂಲದವರ ಬಗ್ಗೆ ಸ್ಥಳೀಯರಲ್ಲಿ ಯಾವ ಭಾವನೆಯಿದೆ?**

ಭಾರತೀಯರು ತಮಗೆ ‘ಕಾಲೂ’ ಎನ್ನುತ್ತಾರೆಂದು ಆಫ್ರಿಕನ್ನರಿಗೆ ಗೊತ್ತು. ನಾವು ಇಂಡಿಯಾದಿಂದ ಹಣ ಮಾಡುವುದಕ್ಕೆಂದೇ ಬಂದವರು. ನಮ್ಮ ಹಿತಾಸಕ್ತಿಗಾಗಿ ಆಳುವ ಸರ್ಕಾರಗಳ ಪರವಾಗಿರ್ತೇವೆ ಎಂದು ಅಪನಂಬಿಕೆ. ಒಮ್ಮೆ ಉಗಾಂಡಾದಲ್ಲಿ 90 ದಿನಗಳ ಒಳಗೆ ಭಾರತೀಯ ಸಮುದಾಯಕ್ಕೆ ದೇಶಬಿಟ್ಟು ಹೋಗಬೇಕೆಂದು ಹೇಳಲಾಯಿತು. ವಲಸೆ ವಿಷಯದಲ್ಲಿ ಆಫ್ರಿಕನ್ ಸ್ನೇಹಿತರ ಜತೆಗೆ ನನ್ನ ಜಗಳ ಆಗುವುದುಂಟು.



ಒಂಟೆ ಮತ್ತು ಬಾಲೆ: ಪುಷ್ಕರ್ ಮೇಳ

ಅವರು ‘ನೀವು ಇಂಡಿಯಾದಿಂದ ಬಂದವರು’ ಎಂದು ಕೆಣಕುತ್ತಾರೆ. ನಾನು ‘ಹೌದು, ನಾವು ವಲಸಿಗರು. ನೀವು? ನಿಮಗೆ ನಿಮ್ಮ ಚರಿತ್ರೆ ಗೊತ್ತಿದೆಯಾ? ಕಿಕುಯುಗಳು ಇಥಿಯೋಪಿಯಾದವರು. ಇಲ್ಲಿನ ಫಲವತ್ತಾದ ಜಮೀನಿಗಾಗಿ ಬೆಟ್ಟ ಇಳಿದು ಬಂದವರು. ಲುವೊಗಳು ಸುಡಾನಿನವರು. ಮೀನು ಆಹಾರವಾಗಿದ್ದ ಅವರು ವೈಟ್‌ನೈಲ್ ನದಿ ದಡದಲ್ಲೇ ನಡೆದು ಬಂದು, ವಿಕ್ಟೋರಿಯಾ ಸರೋವರದ ಅಂಚಿನಲ್ಲಿ ನೆಲೆಸಿದರು. ಬಂಟುಗಳು ದಕ್ಷಿಣ ಆಫ್ರಿಕಾದವರು. ಕಾಂಗೊದಿಂದ ಇನ್ನೊಂದು ಬುಡಕಟ್ಟು ಬಂದಿದೆ. ಹೀಗೆ ಬೇರೆಬೇರೆ ಮೂಲದ ನಾವೆಲ್ಲ ಈಗ ಕೀನ್ಯಾದಲ್ಲಿ ಸೇರಿದ್ದೇವೆ. ಒಟ್ಟಾಗಿ ಬದುಕೋದು ಹೇಗೆ ಎಂದು ಆಲೋಚಿಸೋಣ’ ಎಂದು ಜವಾಬು ಕೊಡುತ್ತೇನೆ.

**◆ ಕೀನ್ಯಾ ಬುಡಕಟ್ಟುಗಳ ಒಳಸಂಘರ್ಷಗಳ ಬಗ್ಗೆ ಗೂಗಿ ಬರೆಯುತ್ತಾರೆ...**

ಕೀನ್ಯಾದಲ್ಲಿ ಲುಯು, ಸ್ವಾಹಿಲಿ, ಬಂಟು, ಮಾಸಯ್, ಕಿಕುಯು ಮೊದಲಾಗಿ 24 ಬುಡಕಟ್ಟುಗಳಿವೆ. ಪ್ರತಿಯೊಂದಕ್ಕೂ ವಿಶಿಷ್ಟ ಸಂಪ್ರದಾಯಗಳಿವೆ. ಮಸೈಗಳಿಗೆ ಆರು-ಏಳು ಅಡಿ ಉದ್ದನೆಯ ದೇಹ.